ನೀನ್ಯಾರೇ ಆಗಿರು, ಚೈತ್ರ ನನಗೆ ಮಾತ್ರ! ಶಿಶಿರದ ಪಾಡಿನ ನಂತರವೂ ಭರವಸೆಯ ದಿನಮಾನವಿದೆಯೆಂದು ನಂಬಿಸಿ, ಭರವಸೆ ನೀಡಿದ ನೀನು – ಚೈತ್ರ.

ಬಂದಿರುವ ಸುಗ್ಗಿಯ ಗೆಳೆಯಾ, ಬಾ–

ಸರಿದುಹೋದ ತಾರುಣ್ಯದುನ್ಮತ್ತ ಗಳಿಗೆಗಳ, ಗದ್ದೆಪಯಿರಿನ ಹಸಿರಿಗೆ; ಘಮ್ಮೆನ್ನುವ ಹೊಲದ ಬೆಳೆಕಾಳಿಗೆ ರಕ್ತ ಬೆಚ್ಚಗಾಗಿಸುತ್ತಿದ್ದ ಗಾಳಿ ಆನಂದವ, ನಕ್ಷತ್ರ – ನಿಹಾರಿಕೆಗಳ ಮಂದ ಬೆಳಕಿಗೂ ಕಣ್ಣುತುಂಬಿ ಮಸಕಾಗುತ್ತಿದ್ದ ಭಾವೋನ್ಮಾದವ, ಕಾರಣವಿಲ್ಲದೆ ಚಿಗುರೆಯಾಗುತ್ತಿದ್ದ ತುಂಟ ಮನಸ್ಸಿನ ಮುಗ್ಧ ಚೇಷ್ಟೆಗಳ; ಕೂತಲ್ಲಿ– ನಿಂತಲ್ಲಿ ಬಣ್ಣದ ಕನಸುಗಳ ತುಂಬಿಕೊಂಡರೂ ಹಗುರತೆಯಲಿ ತೊನೆಯುತ್ತಿದ್ದ ಹಸಿಹಸಿ ಎಳೆಯತೆಯ ನನಗೆ ಮರಳಿ ತಾ. ನನ್ನದೇ ಹೆಸರಿನ ನನ್ನೂರ ನದಿಯ ತಳದ ಬೆಚ್ಚನೆಯ ಅನುಭವವಾಗಿ ಬಾ...

ಇದೇನು ಅಕಾಲದಲ್ಲಿ ನನಗೆ ಯವ್ವನ ಮರಳಿ ಬರುತ್ತಿದೆ.

ಮಾತನ್ನು ಮೌನವನ್ನು ಕವಿತೆಯಾಗಿಸುತ್ತಿದೆ. ನನ್ನ ಪ್ರತಿಹೆಜ್ಜೆಯನ್ನೂ ಹೊಸ ಕಥೆಯ ಸಾಲಾಗಿಸುತ್ತಿದೆ.

ಬದುಕಿಬಂದದ್ದು, ಮುಂದೆ ಬದುಕಲಿರುವುದು ಇವಷ್ಟೇ ಕಥೆ ಕಾವ್ಯವಾಗುವುದಿಲ್ಲ. ಈಗ ಬದುಕುತ್ತಿರುವುದು ಸಹ ಮಹಾಕಾವ್ಯವಾಗಬಲ್ಲುದು – ಅಂದೆಯಲ್ಲವೆ, ಅಲೆಮಾರಿ ಚೈತ್ರ?

ಇಗೋ ನಿನಗಾಗಿ ಬದುಕುವೆ.

★★★

ಆದರೂ ಆತಂಕ ಕಡಿಮೆಯಾಗಿಲ್ಲ. ಇದೆಲ್ಲ ನನ್ನದೆಯೆಂಬ ನಂಬಿಕೆ ಕುದುರುತ್ತಿಲ್ಲ. ಚೈತ್ರ, ನಿನಗೆ ಗೊತ್ತಿಲ್ಲ ಎಷ್ಟು ಜನ ನನ್ನನ್ನು ಕಾಡುಸವರುವ ಹಾಗೆ ಸವರಿ ನೋವಿನ ಹುಟ್ಟಿಗೆ ಕಿಚ್ಚಿಟ್ಟು ಹೋಗಿದ್ದಾರೆ. ಕೆಳಗೆ ಬಿದ್ದಾಗ – ಬೂದಿ ಮಣ್ಣು ತೂರಿ ಚಪ್ಪಾಳೆ ತಟ್ಟಿ ನಕ್ಕಿದ್ದಾರೆ. ಏಕಾಂತದಲ್ಲಿ ರೋದಿಸುವಂತೆ ಮಾಡಿದ್ದಾರೆ. ಆದರೂ ಅವರನ್ನೆಲ್ಲ ಅಪ್ಪನಂತೆ ಕರುಣೆಯಿಂದ ಕ್ಷಮಿಸಿಬಿಟ್ಟಿದ್ದೇನೆ. ಈಗ ನೀನು ಬಂದಿದ್ದೀಯ. ನೀನೂ ಅಂಥವನಲ್ಲವೆಂದು ಹೇಗೆ ನಂಬಲಿ? ಅಲ್ಲದೆ – ಅಲೆಮಾರಿ ನಾನು, ಎನ್ನುತ್ತೀಯ ನೀನು. ಪ್ರೀತಿಗೆ ಜಂಗಮರನ್ನೂ ಕಟ್ಟಿಹಾಕುವ ಶಕ್ತಿಯಿದೆಯಂತೆ ಹೌದೆ? ಗೊತ್ತಿಲ್ಲ. ಆದರೆ ಜಂಗಮರಿಗೆ ಮಾತ್ರ ಸುಲಿಪಲ್ಲ ಗೊರವರಿಗೆ ಮಾತ್ರ ನಿಸರ್ಗವನ್ನೇ ಕಣ್ಣಲ್ಲಿ ಕಟ್ಟಿಹಾಕಿ ಬಂಧಿಸಿಬಿಡುವ ಶಕ್ತಿಯಿದೆ. ನನಗೆ ಗೊತ್ತು.

ಆದರೂ ಮನದ ಬೇಗುದಿಗೆ ಅಂತವಿಲ್ಲ. ನೀನು ನನ್ನವನೆಂಬ ನಂಬಿಕೆ ಮೂಡುತ್ತಿಲ್ಲ.

ಅಲೆಮಾರಿಯ ಪ್ರೀತಿಸುವುದು ಎಲ್ಲ ಯಾತನೆಯ ಮೂಲ. ಯಾವಾಗಲೋ ಅರೆಗಳಿಗೆ ಬಂದು ಮೈ ಸವರಿ ರಮಿಸುತ್ತಾನೆ ಏನೆಲ್ಲ. ರೆಪ್ಪೆ ತೆರೆವ ಮೊದಲೇ, ಹೂದಳವ ಕೀಳಲು ಹಿಡಿವ ಗಳಿಗೆಗೂ ಮೊದಲೇ ಆಡಿದ ಮಾತು, ಕೊಟ್ಟ ಭಾಷೆ ಮರೆತು ನಡೆಯುತ್ತಾನೆ ಎಲ್ಲ – ಎನ್ನುತ್ತಾರೆ ಎಲ್ಲ. ಸುಳ್ಳಾಗಲಿ ಆ ಮಾತು–ಕತೆಗಳು. ಪ್ರೀತಿಗಾಗಿ ತಹಿಸಿ ಸುರಿಸಿದ ಅಶ್ರುಧಾರೆಗಳು. ಮಾತೂ ಆಡದೇ ನಿನ್ನನ್ನು ಪ್ರೀತಿಸಲು ಪ್ರಾರಂಭಿಸಿದ. ಬರಿಯ ನೋವನ್ನೇ ಸಹಿಸಿದ ನನಗೀಗ ನಲಿವಷ್ಟೇ ಇರಲಿ. ಚೈತ್ರ, ನೀನೆಂದೂ ನನ್ನನ್ನು ಬಿಟ್ಟಗಲದಂತಾಗಲಿ!

ಓ! ಅಲೆಮಾರಿ ಯಾತ್ರಿ ಚೈತ್ರ.

ನೀನು ನನ್ನ ಮನದ ಮಣ್ಣ ಹಾದಿಯಲ್ಲಿ, ಕೇವಲ ಕಾಳ ಕತ್ತಲೆಯೇ ತುಂಬಿದ ಮಣ್ಣ ಹಾದಿಯಲ್ಲಿ– ನೆನಹಿನ ದೂಳೆಬ್ಬಿಸುತ್ತ ಬಂದೆ. ಅಲ್ಲಿ ಬೆಳ್ಳಿ ಹೂಗಳರಳಿದವು. ನೀನು – ಹಲವೊಮ್ಮೆ ಬಹುಕಾಲ ಜತೆಯಿದ್ದ ಬಾಲ್ಯಸಖನ ಹಾಗೆ ಕಂಡೆ. ನನ್ನದೇ ಹೆಸರಿನ ನದಿಯ